ದಿನಾಂಕಃ **22-02-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್.ಪಿ.ಸಿ., ಆರೋಪಿ ಪರ ವಕೀಲರಿಂದಃ

**1.** ನಾನು ಪಿರ್ಯಾದಿದಾರರ ಸಂಸ್ಥೆಯಲ್ಲಿ ಕಳೆದ 12 ವರ್ಷಗಳಿಂದ ಕ್ರೆಡಿಟ್ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದೇನೆ. ಆ ಸಂಸ್ಥೆಗೆ ಸಿ.ಇ.ಓ ಅಂತಾ ಹೇಳಿ ಬೇರೆಯವರು ಇದ್ದಾರೆ. ನಿಪಿ-1 ಜಿಪಿಎ ದೃಢೀಕೃತ ಪ್ರತಿ ಎಂದರೆ ಹೌದು. ಅದರ ಮೂಲ ಪ್ರತಿ ಎಲ್ಲಿರುತ್ತದೆ ಎಂದರೆ ನಮ್ಮ ವಕೀಲರಿಗೆ ಗೊತ್ತು. ಸಾಕ್ಷಿ ಮುಂದುವರೆದು ಬೇರೆ ಪ್ರಕರಣದಲ್ಲಿ ಹಾಜರು ಪಡಿಸಿದ್ದೇವೆ. ಯಾವ ಪ್ರಕರಣದಲ್ಲಿ ಹಾಜರು ಪಡಿಸಿರುತ್ತೀರಿ ಎಂದರೆ ಗೊತ್ತಿರುವುದಿಲ್ಲ. ನಿಪಿ-1 ನ್ನು ದಿನಾಂಕಃ 03.05.2019 ರಲ್ಲಿ ಕೊಟ್ಟಿರುತ್ತಾರೆ ಎಂದರೆ ಹೌದು. ನಿಪಿ-1 ನ್ನು ದಿನಾಂಕಃ 13.01.2020 ರಲ್ಲಿ ದಿವಾಣಿ ನ್ಯಾಯಾಧೀಶರು ಹಾವೇರಿ ನ್ಯಾಯಾಲಯದಲ್ಲಿ ಪಡೆದುಕೊಂಡಿದ್ದೀರಿ ಎಂದರೆ ಹೌದು. ನಿಮ್ಮ ಸಂಸ್ಥೆಯಿಂದ ಹಲವಾರು ಪ್ರಕರಣಗಳನ್ನು ಹಾವೇರಿ ನ್ಯಾಯಾಲಯದಲ್ಲಿ ದಾಖಲೆ ಮಾಡಿರುತ್ತೀರಿ ಎಂದರೆ ಹೌದು.

**2.** ಎಲ್ಲ ಪ್ರಕರಣಗಳಲ್ಲಿ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿರುತ್ತೀರಿ ಎಂದರೆ ಅಸಲು ಪ್ರತಿಯನ್ನು ವಕೀಲರಿಗೆ ಕೊಟ್ಟು ಯಾವ ಪ್ರಕರಣದಲ್ಲಿ ಹಾಕಿರುತ್ತಾರೆ ಗೊತ್ತಿಲ್ಲ. ನಿಪಿ-1 ರ ಮೂಲ ಪ್ರತಿಯನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ತೊಂದರೆ ಇರುವುದಿಲ್ಲ, ವಕೀಲರನ್ನು ಕೇಳಬೇಕು. ಆರೋಪಿಗೆ 2015 ರಲ್ಲಿ ಸಾಲವನ್ನು ಕೊಟ್ಟಿರುತ್ತೇನೆ. ಆರೋಪಿ ಪಡೆದ ಸಾಲವನ್ನು ಕಂತಿನ ಪ್ರಕಾರ ಕಟ್ಟುತ್ತಾ ಬಂದಿರುತ್ತಾರೆ ಎಂದರೆ ರೆಗ್ಯುಲರ ಆಗಿ ಕಟ್ಟಿರುವುದಿಲ್ಲ. ನಿಮ್ಮ ಪ್ರಕಾರ ಎಷ್ಟು ಕಂತುಗಳಲ್ಲಿ ಸಾಲ ಕಟ್ಟಬೇಕಾಗಿತ್ತು ಎಂದರೆ 18 ಕಂತುಗಳಲ್ಲಿ ಕಟ್ಟಬೇಕಾಗಿತ್ತು. ಎಷ್ಟು ಕಂತುಗಳಲ್ಲಿ ಆರೋಪಿ ಸಾಲ ಮರುಪಾವತಿ ಮಾಡಿರುತ್ತಾರೆ ಎಂದರೆ ನೋಡಿ ಹೇಳಬೇಕು. ಆ ಸ್ಟೇಟಮೆಂಟಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಇಲ್ಲ. ಆರೋಪಿ ಹಣ ಪಾವತಿ ಮಾಡಿದಂತ

ಸ್ಟೇಟಮೆಂಟಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಆರೋಪಿಗೆ ರೂ.1,00,000/- ಗಳನ್ನು ಜಾಮೀನುದಾರ ಸಾಲ ಅಂತಾ ಕೊಟ್ಟಿರುತ್ತೇವೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದರಿಂದ, ಆಲಿಸಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-Sd/-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.